**O.S.No.37/2023**
**D.W-2**

**ಸಾಕ್ಷಿ ಯನ್ನು ದಿಃ 30.06.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಬಿ ಆರ್ ಆರ್ ವಕೀಲರಿಂದ:**

ನನಗೆ 4 ಜನ ಮಕ್ಕಳು ಎಂದರೆ ಸರಿ. ಸದರಿ 4 ಜನ ಮಕ್ಕಳ ಪೈಕಿ ಬೋರಲಿಂಗಯ್ಯ ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದರಿಯವರಿಗೆ ಪ್ರತಿವಾದಿ 2 ರಿಂದ 4 ರವರು ಹೆಂಡತಿ ಮಕ್ಕಳು ಎಂದರೆ ಸರಿ. ನನ್ನ 4 ಜನ ಮಕ್ಕಳು ಇಲ್ಲಿಯವರೆಗೆ ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ನನ್ನ 4 ಜನ ಮಕ್ಕಳು ನನ್ನ ಗಂಡ ಬಿಟ್ಟು ಹೋದ ಆಸ್ತಿಗಳನ್ನು ಒಟ್ಟು ಕುಟುಂಬದಲ್ಲಿ ಅನುಭವಿಸುತ್ತಿದ್ದಾರೆ ಎಂದರೆ ಸರಿ.

2. ದಾವಾ ಐಟಂ ನಂ.5ರಲ್ಲಿ 2ನೇ ಪ್ರತಿವಾದಿಯ ಗಂಡ ರೂ.20 ಲಕ್ಷ ಖರ್ಚು ಮಾಡಿ ಕಟ್ಟಿರುತ್ತಾರೆ. ಸದರಿ ಮನೆ ಕಟ್ಟಲು ನಮ್ಮ ಮರಗಳನ್ನು ಬಳಸಲಾಗಿತ್ತು ಎಂದರೆ ಸರಿಯಲ್ಲ. ಸದರಿ ಮರಗಳನ್ನು 2-3 ಲಕ್ಷಕ್ಕೆ ನನ್ನ ಮಗ ಬೋರಲಿಂಗಯ್ಯ ತಂದಿದ್ದ. ಬೋರಲಿಂಗಯ್ಯನಿಗೆ ವ್ಯವಸಾಯದ ಆದಾಯ ಮಾತ್ರ ಇತ್ತು. ಬೋರಲಿಂಗಯ್ಯನಿಗೆ ತಂದೆಯ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದು ಇರುವುದಿಲ್ಲ. ಬೋರಲಿಂಗಯ್ಯ ತಂದೆಯ ಆಸ್ತಿಯಿಂದ ಬಂದ ಆದಾಯದಿಂದಲೇ ತಂದೆಯ ಆಸ್ತಿಯಲ್ಲೇ ಮನೆ ಕಟ್ಟಿರುತ್ತಾನೆ ಎಂದರೆ ಸರಿ. ಸದರಿ ಮನೆಗೆ ಉಳಿಕೆ ಹಣವನ್ನು ವಾದಿಯರು ತಮ್ಮ ಆದಾಯವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಬೋರಲಿಂಗಯ್ಯ ಸಾಲ ಮಾಡಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

3. 1ನೇ ವಾದಿ ಬೆಂಗಳೂರಿನಲ್ಲಿ ಕೆಲಸದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ತನಗೆ ಊಟ ನೀಡದೇ ಇರುತ್ತಾನೆ ಎಂದು ನುಡಿಯುತ್ತಾರೆ. ನಾನು ಹೇಳುವ ಮನೆಯನ್ನು ನಮ್ಮ ಜಮೀನಿನಲ್ಲಿ ನಾವೇ ತಯಾರಿಸಿದ ಇಟ್ಟಿಗೆಯಿಂದ ಕಟ್ಟಲಾಗಿದೆ ಎಂದರೆ ಸರಿ. ಬೋರಲಿಂಗಯ್ಯ ಯಾರ ಬಳಿ ಎಷ್ಟು ಸಾಲ ಮಾಡಿರುತ್ತಾರೆ ಎಂದು ನಾನು ಮರೆತಿದ್ದೇನೆ. ಸದರಿ ಮನೆಯನ್ನು ವಾದಿಗಳ ಸಹಾಯದಿಂದ ಕಟ್ಟಿದ ಒಟ್ಟು ಕುಟುಂಬದ ಆದಾಯದಿಂದ ಕಟ್ಟಿದ ಮನೆಯಾಗಿದ್ದರೂ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆ ಕಟ್ಟುವವರೆಗೆ ಎಲ್ಲರೂ ಚೆನ್ನಾಗಿ ಇದ್ದು, ವಾದಿಗಳು ವಿಭಾಗ ಮಾಡಿಕೊಳ್ಳಲು ಕೇಳಿದಾಗ, ಮಾಡಿಕೊಡದ ಕಾರಣ, ಈ ದಾವೇ ಸಲ್ಲಿಸಿರುತ್ತಾರೆ ಎಂದರೆ ಸರಿ.

4. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾನು ಓದು ಬರೆಯದ ಕಾರಣ, ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. 4ನೇ ಪ್ರತಿವಾದಿ ನನ್ನನ್ನು ಕರೆದುಕೊಂಡು ಬಂದು ಸುಳ್ಳು ಸಾಕ್ಷ್ಯ ನುಡಿಸುತ್ತಿದ್ದಾನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.